ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ, ಚುನಾವಣೆ ನಡೆದಂದಿನಿಂದ ಕೆಲಸ ಸ್ವಲ್ಪ ಸ್ಥಗಿತವಾಗಿದೆ. ಆದರೆ ನಾವು ಏನು ಯೋಜನೆಯನ್ನು ರೂಪಿಸಿದ್ದೇವೆ, ಜೂನ್ ತಿಂಗಳವರಗೆ ಅದಕ್ಕಾಗಿ ಹಣವನ್ನೂ ಕೂಡ ಒದಗಿಸಿದ್ದೇವೆ. ಏಪ್ರಿಲ್ ಮೇ ತಿಂಗಳ ಅಂತ್ಯದವರೆಗೆ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಯೋಜನೆಗನುಗುಣವಾಗಿ ಮಾಡಿದ್ದೇವೆಯೋ, ಆ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳಬೇಕು. ಮತ್ತು ಜನರಿಗೆ ಉದ್ಯೋಗವನ್ನು ಒದಗಿಸಿಕೊಡಬೇಕು. ತಕ್ಷಣವೇ ಆಲ್ಲಿ ಕೆಲಸವನ್ನು ಪ್ರಾರಂಭ ಮಾಡಲು ಜಿಲ್ಲಾಧಿಕಾರಿಗಳಿಗೆ ಆ ದೇಶವನ್ನು ಕೊಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ತರೀಕೆರೆಯ ವಿಜ್ಞಾನ ಇಂಡಸ್ಟ್ರೀಸ್‌ವಲ್ಲಿ ದಿನಗೂಲಿ ಕಾರ್ಮಿಕರಾಗಿ ಬಹಳ ವರ್ಷಗಳಿಂದ ಕೆಲಸ ಮಾಡುತ್ತಾ ಇರುವ ಸುಮಾರು ೮೫–೯೦ ಜನರಿದ್ದು ಅವರೆಲ್ಲರೂ ಕ್ಯಾಸ್ಯುಯಲ್ ಲೇಬರರ್ಸ್ ಇದ್ದಾರೆ. ಅವರ ಸೇವೆಯನ್ನು ಪ್ರತಿ ೬ ತಿಂಗಳಿಗೊಮ್ಮೆ ತೆಗೆದು ಹಾಕುತ್ತಿರುವುದರಿಂದ ಅವರ ಸ್ಥಿತಿ ಚಿಂತಾಜನಕವಾಗಿದೆ. ನಾನು ಸರ್ಕಾರದಲ್ಲಿ ಮನವಿ ಮಾಡಿ ಕೊಳ್ಳುವುದೇನೆಂದರೆ, ಅವರನ್ನು ಬಿ. ಇ. ಎಂ. ಎಲ್, ಗೆ ಸೇರಿಸಬೇಕು. ನಮ್ಮ ಜಿಲ್ಲೆಯಲ್ಲಿ ಅವರಲ್ಲೂ ನಮ್ಮ ತಾಲ್ಲೂಕಿನಲ್ಲಿ ಇರತಕ್ಕಂತಹ ಇಂಡಸ್ಟ್ರೀಸ್ ಒಂದೇ ಒಂದು. ಆದ್ದರಿಂದ ಇದನ್ನು ಉತ್ತಮ ಪಡಿಸಬೇಕು. ಇಲ್ಲ ಅದನ್ನು ಬಿ. ಇ. ಎಂ. ಎಲ್. ಗಾದರೂ ಸೇರಿಸಿ ಅಲ್ಲಿರತಕ್ಕಂತಹ ಕ್ಯಾಸ್ಯುಯಲ್ ಲೇಬರರ್ಸ್‌ನ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕು.

ಶ್ರೀ ಎಂ. ರಘುಪತಿ.—ನಾನು ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಕೂಡಲೇ ಆ ವಿಷಯದ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಸಂಬಂಧಪಟ್ಟ ಮಂತ್ರಿಗಳು ಕಳೆದ ಎರಡು ದಿವಸಗಳಿಂದ ಸದನದಲ್ಲೇ ಇಲ್ಲ. ಅವರು ಎಲ್ಲಿ ಹೋಗಿದ್ದಾರೆ ?

ಶ್ರೀ ವಸಂತ ಸಾಲಿಯಾನ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಂತಹ ಭೂ ನ್ಯಾಯ ಮಂಡಳಿಗಳನ್ನು ವಿಸರ್ಜಿಸಿದ್ದರಿಂದ ಅಲ್ಲಿ ಕೆಲಸ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡಲೇ ಭೂನ್ಯಾಯ ಮಂಡಳಿಗಳನ್ನು ಪುನರಚಿಸಲಾಗುವುದು.

ಶ್ರೀ ಬಿ. ವಿ ಕರೀಗೌಡ.— ಹಾಸನ ಹಾಗೂ ಗಂಡಸಿ ಕ್ಷೇತ್ರದ ಸುತ್ತಮುತ್ತ ಇರತಕ್ಕಂತಹ ಊರುಗಳಲ್ಲಿ ದನಕರುಗಳಿಗೆ ರೋಗ ಹರಡಿ ಆದರಿಂದ ದೊಡ್ಡ ಅನಾಹುತವಾಗಿ ಸುಮಾರು ದನಕರುಗಳು ಸತ್ತು ಹೋಗಿದ್ದು, ಅಲ್ಲಿ ಔಷದಿ ಸರಬರಾಜು ಆಗದೆ ಇದ್ದು, ಇದರ ಬಗ್ಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂಬದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ.—ಈ ರೋಗವು ೭–೩–೮೫ ರಂದು ಅಲ್ಲಿ ಕಂಡು ಬಂದು ರೋಗ ತಗುಲಿದ್ದ ೭ ರಾಸುಗಳೂ ಮೃತಪಟ್ಟಿದ್ದು, ೧೦–೩–೮೫ ರಂದು ವಿಚಾರವನ್ನು ತಿಳಿದ ತಕ್ಷಣ ಉಳಿದ ಎಲ್ಲ ರಾಸುಗಳಿಗೆ ಚುಚ್ಚು ಮದ್ದನ್ನು ಹಾಕಲಾಗಿದೆ. ರಾಸುಗಳಿಗೆ ಕಾಲು ಬಾಯಿ ಜ್ವರದ ಬಾಧೆಯಿದ್ದು, ಸಾಕಷ್ಟು ಔಷಧಿಯನ್ನು ಈಗಾಗಲೇ ಸರಬರಾಜು ಮಾಡಲಾಗಿದ್ದು, ೧೦–೩–೮೫ ರಿಂದೀಚೆಗೆ ಬೇರೆ ಯಾವುದೇ ರಾಸುಗಳಿಗೆ ಕಾಯಿಲೆ ಹರಡಿದ್ದು ಕಂಡು ಬಂದಿಲ್ಲ.

ಶ್ರೀ ಜಿ. ಟಿ. ಜಯಕುಮಾರ್,—ನಂಜನಗೂಡಿನಲ್ಲಿ ಬಂದೀಖಾನ್ ಇಲಾಖೆಯಿಂದ ಜೈಲು ಕಟ್ಟಡವನ್ನು ಪುರಜನರು ವಾಸಿಸುತ್ತಿರುವ ಮಧ್ಯ ಸ್ಥಳದಲ್ಲಿ ಕಟ್ಟಲಾಗುತ್ತಿದ್ದು. ಇದರಿಂದ ಆಸ ಪಾಸಿನ ಜನರಿಗೆ ತೊಂದರೆಯಾಗಿದೆ. ಇದರ ಬದಲು ಪುರ ಸಭೆಯವರು ಬೇರೆ ಜಾಗವನ್ನೂ ಕೂಡ ಕೊಡುವುದಕ್ಕೆ ತಯಾರಾಗಿದ್ದರೆ. ಕಟ್ಟುತ್ತಿರುವ ಕಟ್ಟಡವನ್ನು ತಕ್ಷಣವೇ ನಿಲ್ಲಿಸಿಲು ಸಂಬಂಧಪಟ್ಟ ಇಲಾಖೆಯವರಿಗೆ ಕೂಡಲೆ ಆದೇಶವನ್ನು ನೀಡಿ, ಆಸು–ಪಾಸಿನಲ್ಲಿರುವ ಜನರಿಗೆ ಅನುಕೂಲವನ್ನು ಕಲ್ಪಿಸಬೇಕೆಂದು ಈ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ನಂಜನಗೂಡಿನಲ್ಲಿ ಜೈಲು ಕಟ್ಟಡವನ್ನು ಕಟ್ಟಲು ೧೯೭೯ನೇ ಇಸವಿಯಲ್ಲೇ ಎರಡು ಎಕರೆ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ೨ ಹಂತದಲ್ಲಿ ವಾಸದ ಮನೆಗಳು ಸುತ್ತಮುತ್ತ ಇರಲಿಲ್ಲ. ಆದರೆ ಇತ್ತೀಚೆಗೆ ೩,೮೯,೦೦೦–೦೦ ರೂಪಾಯಿಗಳ ವೆಚ್ಚದಲ್ಲಿ ಜೈಲು